## ವಾರ್ಡ್ ನಂ: 83 ಕಾಡುಗುಡಿ ವಾರ್ಡ್ ಕಮಿಟಿ ಸಭೆಯ ನಡುವಳಿಗಳು:-

ದಿನಾಂಕ: 20/11/2021 ರಂದು ಕಾಡುಗುಡಿ ವಾರ್ಡ್ ಸಂಖ್ಯೆ: 83 ರ ವ್ಯಾಪ್ತಿಯಲ್ಲಿ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ:ಬಿ12(5)/ಪಿಆರ್/35/2020-21 ದಿನಾಂಕ:21-09-2020 ಆದೇಶದಂತೆ ವಾರ್ಡ್ ಕಛೇರಿಯಲ್ಲಿ ಮಾನ್ಯ ವಾರ್ಡ್ ನೋಡಲ್ ಅಧಿಕಾರಿ, ಕಮಿಟಿಯ ಕಾರ್ಯದರ್ಶಿ, ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರ ಸಮಕ್ಷಮದಲ್ಲಿ ಸಭೆ ನಡೆಸಲಾಯಿತು.

### ಈ ಕೆಳಕಂಡ ಅಧಿಕಾರಿಗಳು ಹಾಗೂ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ

1. ಶ್ರೀ.ಡಿ.ಎಂ.ಮುನಿರೆಡ್ಡಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ಎನ್.ವೆಂಕಟೇಶ್, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
3. ಶ್ರೀ.ಎನ್.ಆರ್.ಮುನಿಯಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆಮೂಲಭೂತ ಸೌಕರ್ಯ ವಿಭಾಗ, ಮಹದೇವಪುರ
4. ಶ್ರೀ.ಗಂಗರಾಜು, ಸಹಾಯಕ ಅಭಿಯಂತರರು, ಬೆಸ್ಕಾಂ, ಕಾಡುಗುಡಿ
5. ಅಕ್ಕಮಹಾದೇವಿ, ಹಿರಿಯ ಆರೋಗ್ಯ ನಿರೀಕ್ಷಕರು, ವಾರ್ಡ್ ನಂ:83, ಕಾಡುಗುಡಿ, ಬಿ.ಬಿ.ಎಂ.ಪಿ
6. ಶ್ರೀ.ಮಂಜುನಾಥ್, ದ್ವಿತಿಯ ದರ್ಜೆ ಸಹಾಯಕ/ವರ್ಕ್ ಇನ್ಸ್‌ಪೆಕ್ಟರ್, ಕಾಡುಗುಡಿ ವಾರ್ಡ್ ನಂ.83
7. ಡಾ|| ಕಂತರಾಜು, ಆರೋಗಯಾಧಿಕಾರಿಗಳು, ಪ್ರಾರ್ಥಮಿಕ ಆರೋಗ್ಯ ಕೇಂದ್ರ, ಕಾಡುಗುಡಿ.
8. ಡಾ|| ವಂದನಾ, ಆರೋಗ್ಯಾಧಿಕಾರಿಗಳು, ಪ್ರಾರ್ಥಮಿಕ ಆರೋಗ್ಯ ಕೇಂದ್ರ, ಕಾಡುಗುಡಿ.
9. ಶ್ರೀ.ಕುಪೇಂದ್ರ, ಸಬ್ ಇನ್ಸ್‌ಪೆಕ್ಟರ್, ಕಾಡುಗುಡಿ ಪೋಲೀಸ್ ಠಾಣೆ,
10. ಶ್ರೀ.ವೇಣುಗೋಪಾಲ್, ಸಬ್ ಇನ್ಸ್‌ಪೆಕ್ಟರ್, ಟ್ರಾಫೀಕ್ ಕಾಡುಗುಡಿ ಪೋಲೀಸ್ ಠಾಣೆ,
11. ಶ್ರೀ.ಮನೋಜ್ ಕುಮಾರ್, ಕಂದಾಯ ಪರಿವೀಕ್ಷಕರು, ಕಾಡುಗುಡಿ ವಾರ್ಡ್ ನಂ.83
12. ಶ್ರೀ.ಪಿ.ಸುದರ್ಶನ್, ಕಂದಾಯ ವಸೂಲಿಗಾರ, ಕಾಡುಗುಡಿ ವಾರ್ಡ್ ನಂ.83
13. ಶ್ರೀ.ಶ್ರೀನಿವಾಸ್, ಕಂದಾಯ ವಸೂಲಿಗಾರ, ಕಾಡುಗುಡಿ ವಾರ್ಡ್ ನಂ.83
14. ಶ್ರೀ.ವೆಂಕಟೇಶ್, ಸಿಬ್ಬಂದಿ, ಬಿ.ಬಡ್ಬ್ಯೂ.ಎಸ್.ಎಸ್.ಬಿ
15. ಶ್ರೀ.ಹನುಮಂತಪ್ಪ, ಸಿಬ್ಬಂದಿ, ಬಿ.ಬಡ್ಬ್ಯೂ.ಎಸ್.ಎಸ್.ಬಿ

### ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು

| | |
|---|---|
| 1. ಭಾಗ್ಯಮ್ಮ | 13. ಗವಾಸ್ಕರ್ ನಾಯ್ಕ್ |
| 2. ಮಾಲತಿ ರೆಡ್ಡಿ | 14. ಸುಮನ್ ಸೇನಾಪತಿ |
| 3. ವೆಂಕಟೇಶ್ ಗೌಡ | 15. ಜಗದೀಶ್ವರಿ |
| 4. ಹರಿಪ್ರಸಾದ್ ರೆಡ್ಡಿ | 16. ಮುನಿಲಕ್ಷ್ಮಿ |
| 5. ನಾರಾಯಣ್ ರೆಡ್ಡಿ | 17. ಅನಿತ |
| 6. ನಾಗರಾಜ್ ರೆಡ್ಡಿ | 18. ಮಂಜುಳ |
| 7. ಹನುಮಂತ ಬಾಬು | 19. ಆನಂದ್ ಕುಮಾರ್ |
| 8. ಸಂಪಂಗಿ | 20. ಗೌತಮ್ ಮಿಶ್ರ |
| 9. ಎಸ್.ಮಾರಪ್ಪ | 21. ಎನ್.ಎಂ.ಗೋಪಾಲ್ |
| 10. ರವಿ-ಗುಟ್ಟ | 22. ದಿಲೀಪ್ |
| 11. ರವಿ-ಕೇಬಲ್ | 23. ಪ್ರಮೀಳ |
| 12. ವಿನೋದ್ ಕುಮಾರ್ | |

ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು, ಕಮಿಟಿಯ ಕಾರ್ಯದರ್ಶಿಗಳು, ಹಿರಿಯ ಆರೋಗ್ಯ ನಿರೀಕ್ಷಕರು, ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು ಉಪಸ್ಥಿತಿಯಲ್ಲಿದ್ದು, ಹಿರಿಯ ಆರೋಗ್ಯ ನಿರೀಕ್ಷಕರು ಸ್ವಾಗತಾ ಕೋರಿದ ನಂತರ ನೋಡಲ್ ಅಧಿಕಾರಿಗಳು ಕಲಾಪವನ್ನು ಪ್ರಾರಂಭಿಸಲು ಸೂಚಿಸಿದರು.

1. ಹಿಂದಿನ ಸಭೆಯಲ್ಲಿ ನಡೆದ ನಡವಳಿಗಳ ವರದಿಯನ್ನು ಅನುಷ್ಠಾನಗೊಂಡಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮಾಹಿತಿಯನ್ನು ಪಡೆದು, ಸಾರ್ವಜನಿಕರ ಮುಂದೆ ಮಂಡಿಸಲಾಯಿತು.

2. ಸಭೆಯಲ್ಲಿ ಸಾರ್ವಜನಿಕರು ದುರಸ್ತಿಯಾಗಿರುವ ವಿದ್ಯುತ್‌ಚ್ಛಕ್ತಿ ದೀಪಗಳನ್ನು ಕೂಡಲೇ ಸರಿಪಡಿಸಲು ಕೋರಿರುವ ಮೇರೆಗೆ ಬಿಬಿಎಂಪಿ-ಗುತ್ತಿಗೆದಾರರ ಸಿಬ್ಬಂದಿಯಾದ ಶ್ರೀ.ಶಿವ ರವರು ದುರಸ್ತಿ ಕಂಡುಬಂದ 24 ಗಂಟೆಗಳ ಒಳಗಾಗಿ ಸರಿಪಡಿಸಿಕೊಡುವುದಾಗಿ ತಿಳಿಸಿದರು.

3. ಸಭೆಯಲ್ಲಿ ಸಾರ್ವಜನಿಕರು ಡಿ-ಸಿಲ್ವಾ ರಸ್ತೆಯ ಉದ್ದಕ್ಕೂ ವಿದ್ಯುತ್‌ಚ್ಛಕ್ತಿ ದೀಪಗಳು ದುರಸ್ತಿಯಾಗಿರುವ ಬಗ್ಗೆ ದೂರನ್ನು ಪ್ರಸ್ತಾಪಿಸಿದಾಗ, ಬಿಬಿಎಂಪಿ-ಗುತ್ತಿಗೆದಾರರ ಸಿಬ್ಬಂದಿಯಾದ ಶ್ರೀ.ಶಿವ ರವರು ಕೂಡಲೇ ಸರಿಪಡಿಸುವುದಾಗಿ ತಿಳಿಸಿದರು.

4. ಸಭೆಯಲ್ಲಿ ಸಾರ್ವಜನಿಕರು ಎ.ಬಿ.ವಾಜಪೇಯಿ ರಸ್ತೆಯಲ್ಲಿ ಮಾರ್ವಲ್ ಅಪಾರ್ಟ್‌ಮೆಂಟ್ ಹತ್ತಿರ ರಸ್ತೆಯ ಉದ್ದಕ್ಕೂ ಬೀದಿ ದೀಪಗಳ ಒಂದೇ ಸ್ವಿಚ್‌ನ್ನು ಅಳಡಿಸಿದ್ದು, ಇದನ್ನೂ ಎರಡು-ಮೂರು ಕಡೆಗೆ ಸ್ವಚ್‌ನ್ನು ಅಳವಡಿಸಲು ಕೋರಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಗಂಗರಾಜು, ಸಹಾಯಕ ಅಭಿಯಂತರರು, ಬೆಸ್ಕಾಂ ರವರು ಟೈಮರ್ ಸ್ವಿಚ್‌ಗಳನ್ನು ಅಳವಡಿಸುವುದಾಗಿ ತಿಳಿಸಿರುತ್ತಾರೆ.

5. ಸಭೆಯಲ್ಲಿ ಹರ್ಷ ರವರು ಡಿ-ಸಿಲ್ವಾ ರಸ್ತೆಯಲ್ಲಿ ಬೀದಿ ದೀಪಗಳ ಕಂಬಗಳನ್ನು ಮತ್ತು ವಿದ್ಯುತ್‌ಚ್ಛಕ್ತಿ ದೀಪಗಳನ್ನು ಅಳವಡಿಸಲು ಕೋರಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಗಂಗರಾಜು, ಸಹಾಯಕ ಅಭಿಯಂತರರು, ಬೆಸ್ಕಾಂ ರವರು ವಿಷಯದ ಬಗ್ಗೆ ಮೇಲಾಧಿಕಾರಿಗಳಿಗೆ ತಿಳಿಸಿ, ಕ್ರಮಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

6. ಸಭೆಯಲ್ಲಿ ಕೋವಿಡ್ -19ರ ಬಗ್ಗೆ ಡಾ॥ ಕಾತರಾಜು ರವರು ಸಭೆಯನ್ನು ಉದ್ದೇಶಿಸಿ, ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬಿಬಿಎಂಪಿ ವತಿಯಿಂದ ರೂ.2-00 ಲಕ್ಷ ಬಿಡುಗಡೆಗೊಳಿಸಿ, ಕೋವಿಡ್ ಉದ್ದೇಶಕ್ಕೆ ಬಳಸಿಕೊಳ್ಳಲು ಸೂಚಿಸಿರುತ್ತಾರೆ. ಅದರಂತೆ, ರೂ.1,99,623.00 ಗಳನ್ನು ಈಗಾಗಲೇ ಕೋವಿಡ್-19ರ ಔಷದಿ ಖರೀದಿಗೆ ಹಾಗೂ ಲಸಿಕಾ ಮೇಳಕ್ಕೆ ಊಟದ ವ್ಯವಸ್ಥೆ, ಬ್ಯಾನರ್ಸ್ ಹಾಗೂ ಒಂದು ಪ್ರಿಂಟರ್‌ನ್ನು ಖರೀದಿ ಮಾಡಲಾಗಿರುತ್ತದೆ ಹಾಗೂ ಆಸ್ಪತ್ರೆಯ ತುರ್ತು ವ್ಯವಸ್ಥೆ, ಆರೋಗ್ಯ ರಕ್ಷಾ ಸಮಿತಿ ಇರುವ ಖರ್ಚುಗಳಿಗೆ ಬಳಸಿಕೊಂಡಿರುತ್ತೇವೆ ಎಂದು ಸಭೆಯ ಗಮನಕ್ಕೆ ತಂದಿರುತ್ತಾರೆ.

7. ಸಭೆಯಲ್ಲಿ ರವಿ-ಗುಟ್ಟ ರವರು ಅಂಬೇಡ್ಕರ್‌ಗುಟ್ಟದಲ್ಲಿ 10 ಅಡ್ಡ ರಸ್ತೆಗಳಿದ್ದು, ಸಾರ್ವಜನಿಕರು ನೀರಿನ ಕೊರತೆಯನ್ನು ಅನುಭವಿಸುತ್ತಿದ್ದು, ನೀರಿನ ಪ್ರಮಾಣವನ್ನು ಹೆಚ್ಚಿಸಲು ಕೋರಿದ ಮೇರೆಗೆ, ಸಭೆಯಿಂದ ನವೀನ್ ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ದೂರವಾಣಿ ಮುಖಾಂತರ ಮಾತನಾಡಿದಾಗ ನವೀನ್ ರವರು ಬೂಸ್ಟರ್‌ನ್ನು ಅತಿ ಶೀಘ್ರದಲ್ಲಿ ಅಳವಡಿಸಿ, ನೀರಿನ ಪ್ರಮಾಣವನ್ನು ಹೆಚ್ಚಿಸುವುದಾಗಿ ತಿಳಿಸಿರುತ್ತಾರೆ.

8. ಸಭೆಯಲ್ಲಿ ಸುಮನ್ ಸೇನಾಪತಿ ರವರು ಕೃಷ್ಣ-ಕುಠಿರಾ ಮತ್ತು ಎ.ಬಿ.ವಾಜಪೇಯಿ ರಸ್ತೆ- ಕೂಡುವ ಜಾಗದಲ್ಲಿ ಕಲ್ವರ್ಟ್‌ನ್ನು ಅಳವಡಿಸಲು ಕೋರಿದ್ದು, ಸದರಿ ವಿಷಯಕ್ಕೆ ಶ್ರೀ.ಮುನಿಯಪ್ಪ, ಸ.ಕಾ.ಅ (ರ.ಮೂ.ಭೂ.ಸೌ) ರವರು ಸ್ಥಳವನ್ನು ಪರಿವೀಕ್ಷಿಸಿ, ಕ್ರಮವನ್ನು ಕೈಗೊಳ್ಳುವುದಾಗಿ ತಿಳಿಸಿದರು.

9. ಸಭೆಯಲ್ಲಿ ಆನಂದ್ ಕುಮಾರ್ ರವರು ದಿನ್ನೂರು-ಮೋಲೇಕ್ಸ್ ಮಧ್ಯದಲ್ಲಿ ಹಾದು ಹೋಗುವ ಚರಂಡಿಯಲ್ಲಿ ಹೂಳು ತುಂಬಿದ್ದು, ಕೂಡಲೇ, ಹೂಳನ್ನು ತೆಗೆಯಲು ಕೋರಿರುತ್ತಾರೆ. ಸದರಿ ವಿಷಯಕ್ಕೆ ಶ್ರೀ.ಮುನಿಯಪ್ಪ, ಸ.ಕಾ.ಅ (ರ.ಮೂ.ಭೂ.ಸೌ) ರವರು ಮಳೆ ನಿಂತ ಮೇಲೆ, ಚರಂಡಿಯಲ್ಲಿನ ಹೂಳನ್ನು ತೆಗೆಯುವ ಬರವಸೆಯನ್ನು ನೀಡಿದರು.

10. ಸಭೆಯಲ್ಲಿ ಗೌತಮ್ ಮಿಶ್ರ ರವರು ಮುಂದಿನ ಸಭೆಗೆ ಶ್ರೀ.ಮಿರ್ಜ, ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ ಶ್ರೀ.ಜಯಶಂಕರ್ ರೆಡ್ಡಿ, ಕಾರ್ಯಪಾಲಕ ಅಭಿಯಂತರರು, ರ.ಮೂ.ಭೂ.ಸೌ ವಿಭಾಗ, ರವರನ್ನು ಆಹ್ವಾನಿಸುವುದಾಗಿ ಕೋರಿರುತ್ತಾರೆ. ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು ವಾರ್ಡ ಕಮಿಟಿ ಕಾರ್ಯದರ್ಶಿಗೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

16. ಸಭೆಯಲ್ಲಿ ಸುಮನ್ ರವರು ರಾತ್ರಿ ವೇಳೆ ಅನಧಿಕೃತ ವ್ಯಕ್ತಿಗಳು ರಸ್ತೆ ಮತ್ತು ಪಾರ್ಕ್‌ಗಳ ಬಳಿ ಅನ್ಯೆತಿಕ ಚಟುವಟಿಕೆಗಳನ್ನು ನಡೆಸುತ್ತಿದ್ದು, ಸದರಿ ವಿಷಯವಾಗಿ ಪೋಲೀಸ್ ಇಲಾಖೆಯು ಗಮನ ಹರಿಸಬೇಕೆಂದು ಕೋರಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ.ಕುಪೇಂದ್ರ, ಸಬ್ ಇನ್ಸ್‌ಪೆಕ್ಟರ್, ಕಾಡುಗುಡಿ ಪೋಲೀಸ್ ಠಾಣೆ, ರವರು ಸದರಿ ಸ್ಥಳಗಳಲ್ಲಿ ಸಿ.ಸಿ. ಕ್ಯಾಮೇರಗಳನ್ನು ಅಳವಡಿಸಲು ಇಲಾಖೆಯ ಮುಖ್ಯಸ್ಥರಿಗೆ ತಿಳಿಸುವುದಾಗಿ ಹಾಗೂ ವಿಷಯಕ್ಕೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

17. ಸಭಯಲ್ಲಿ ಸಂಪಂಗಿ ರವರು ಎ.ಕೆ.ಜಿ ಕಾಲೋನಿಯ ಬಳಿ ಇರುವ ಪಾಲಿಟೇಕ್ನಿಕ್ ಕಾಲೇಜಿನ ಕಿಟಕಿ-ಬಾಗಿಲುಗಳನ್ನ ಹಾಗೂ ವಿದ್ಯುತ್‌ಚ್ಛಕ್ತಿ ದೀಪಗಳನ್ನು ರಾತ್ರಿ ವೇಳೆಯಲ್ಲಿ ಹೊಡೆದು ಹಾಕುತ್ತಿದ್ದು, ಅನ್ಯೆತಿಕ ಚಟುವಟಿಕೆಗಳನ್ನು ನಡೆಸುತ್ತಿರುವುದು ಕಂಡುಬಂದಿದ್ದು, ಸದರಿ ವಿಷಯವಾಗಿ ಪೋಲೀಸ್ ಇಲಾಖೆಯು ಕ್ರಮ ಕೈಗೊಳ್ಳಬೇಕಂದು ಕೋರಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ.ಕುಪೇಂದ್ರ, ಸಬ್ ಇನ್ಸ್‌ಪೆಕ್ಟರ್, ಕಾಡುಗುಡಿ ಪೋಲೀಸ್ ಠಾಣೆ, ರವರು ಅನುಮಾನಾಸ್ಪದ ವ್ಯಕ್ತಿಗಳೆಂದು ತಿಳಿದು ಬಂದಲ್ಲಿ ವೈಟ್‌ಫೀಲ್ಡ್ ಪೋಲೀಸ್ ಠಾಣೆಗೆ ಮಾಹಿತಿ ನೀಡಲು ತಿಳಿಸಿರುತ್ತಾರೆ. ಹಾಗೂ 112ಕ್ಕೆ ದೂರವಾಣಿ ಮೂಲಕ ದೂರನ್ನು ಸಲ್ಲಿಸಲು ತಿಳಿಸಿರುತ್ತಾರೆ.

18. ಸಭೆಯಲ್ಲಿ ಸಾರ್ವಜನಿಕರು ಹೋಪ್ ಫಾರಂ ವೃತ್ತದ ಬಳಿ ವಾಹನ ನಿಲುಗಡೆಗೆ ಸೂಕ್ತ ಟೈಮರ್‌ನ್ನು ಅಳವಡಿಕೆ ಇಲ್ಲದಿರುವುದರಿಂದ, ಹಾಗೂ ಎಡಭಾಗದ ಫ್ರೀ ಟರ್ನ್ ಇಲ್ಲದಿರುವುದರಿಂದ, ಶಾಲಾ ಮಕ್ಕಳಿಗೆ ಮತ್ತು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವ ಬಗ್ಗೆ ತಿಳಿಸಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ.ವೇಣುಗೋಪಾಲ್, ಸಬ್ ಇನ್ಸ್‌ಪೆಕ್ಟರ್, ಟ್ರಾಫೀಕ್ ಕಾಡುಗುಡಿ ಪೋಲೀಸ್ ಠಾಣೆ, ರವರು ಹೋಪ್ ಫಾರಂ ವೃತ್ತದ ಬಳಿ 120 ಸೆಕೆಂಡ್‌ಗಳ ಟೈಮರ್‌ಗಳನ್ನು ಅಳಡಿಸುವುದಾಗಿ ಹಾಗೂ ಫ್ರೀ ಲೆಫ್ಟ್ ಟರ್ನ್ ಬಗ್ಗೆ ರಸ್ತೆ ಮೂಲಭೂತ ಸೌಕರ್ಯ ವಿಭಾಗ, ಬಿಬಿಎಂಪಿ ರವರಿಗೆ ಪತ್ರವನ್ನು ಬರೆಯಲು ಮೇಲಾಧಿಕಾರಿಗಳಿಗೆ ಮನವಿ ಮಾಡಿಕೊಳ್ಳುವುದಾಗಿ ತಿಳಿಸಿದರು.

19. ಸಭೆಯಲ್ಲಿ ಸುಮನ್ ಸೇನಾಪತಿ ರವರು ಎ.ಬಿ.ವಾಜಪೇಯಿ ರಸ್ತೆಯಲ್ಲಿ ಅನಧಿಕೃತವಾಗಿ ರಸ್ತೆಯಲ್ಲಿ ವಾಹನವನ್ನು ನಿಲುಗಡೆ ಮಾಡಿ, ಸಾರ್ವಜನಿಕರು ರಸ್ತೆಯಲ್ಲಿ ಓಡಾಡುವಾಗ ಚೈನ್ ಕಳ್ಳತನ ಮಾಡುತ್ತಿರುವುದು ಇತ್ತೀಚಿನ ದಿನಗಳಲ್ಲಿ ಕಂಡುಬಂದಿರುತ್ತದೆ. ಆದುದರಿಂದ, ರಸ್ತೆಯಲ್ಲಿ ಅನಧಿಕೃತಾಗಿ ನಿಲುಗಡೆ ಮಾಡಿರುವ ವಾಹನಗಳಿಗೆ ದಂಡ ವಿಧಿಸಬೇಕೆಂದು ಕೋರಿರುತ್ತಾರೆ. ಸದರಿ ವಿಷಯಕ್ಕೆ ಶ್ರೀ.ವೇಣುಗೋಪಾಲ್, ಸಬ್ ಇನ್ಸ್‌ಪೆಕ್ಟರ್, ಟ್ರಾಫೀಕ್ ಕಾಡುಗುಡಿ ಪೋಲೀಸ್ ಠಾಣೆ, ರವರು ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

20. ಸಭೆಯಲ್ಲಿ ರವಿ ರಾಮೇಗೌಡನಗರ ರವರು ಎಫ್.ಸಿ.ಐ ಗೋಡೌನ್ ರಸ್ತೆಯಲ್ಲಿ ಸುಮಾರು ದಿನಗಳಿಂದ ವಾಹನಗಳನ್ನು ರಸ್ತೆಯಲ್ಲಿ ನಿಲ್ಲಿಸಿ, ಅಲ್ಲಿ ಚಲಿಸುವ ವಾಹನಗಳಿಗೆ ತೊಂದರೆ ಉಂಟಾಗುತ್ತಿದ್ದಿ ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಿರುತ್ತಾರೆ. ಸದರಿ ವಿಷಯಕ್ಕೆ ಶ್ರೀ.ವೇಣುಗೋಪಾಲ್, ಸಬ್ ಇನ್ಸ್‌ಪೆಕ್ಟರ್, ಟ್ರಾಫೀಕ್ ಕಾಡುಗುಡಿ ಪೋಲೀಸ್ ಠಾಣೆ, ರವರು ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

24. ಸಭೆಯಲ್ಲಿ ಹರಿಪ್ರಸಾದ್ ರೆಡ್ಡಿ, ಮೈತ್ರಿ ಬಡಾವಣೆ ರವರು ವಾರ್ಡ್ ವಾಟ್ಸ್ ಆಪ್ ಗ್ರೂಪ್‌ನಲ್ಲಿ ಕೆಲವರು ವಾರ್ಡ್‌ಗೆ ಸಂಬಂಧಪಡೆದೇ ಇರುವವರನ್ನಾ ಕೂಡಲೇ ಗ್ರೂಪ್‌ನಿಂದ ತೆಗೆದು ಹಾಕಬೇಕೆಂದು ಕೋರಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟವರು ತಿಳಿದು ಬಂದಲ್ಲಿ ಕೂಡಲೇ ವಾರ್ಡ್ ಕಾರ್ಯದರ್ಶಿಗೆ ತಿಳಿಸಲು ಸೂಚಿಸಿರುತ್ತಾರೆ.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ. ನೋಡಲ್ ಅಧಿಕಾರಿ ರವರ ಸೂಚನೆಯಂತೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

20/11/2021

**(ಎನ್.ವೆಂಕಟೇಶ್)**

**ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ**

**ವಾರ್ಡ್ ನಂ: 83 ಕಾಡುಗುಡಿ**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ